ಛತ್ರ ಖಾಲಿ ಇದೆ
ಶ್ರೀ ಪಿ.ಕೆ.ವಿ. ಆಚಾರ್ಯ ಸಭಾ ಭವನ
ನಂ. ಸಿ.ಎ 19, ದಟ್ಟಗಳ್ಳಿ, 3ನೇ ಹಂತ, ಕನಕದಾಸನಗರ, ಮೈಸೂರು
ನೂತನವಾಗಿ ನಿರ್ಮಿಸಿರುವ ಕಲ್ಯಾಣ ಮಂಟಪ
ಅತ್ಯುತ್ತಮ ಸೌಕರ್ಯವುಳ್ಳ ಕಲ್ಯಾಣ ಮಂಟಪ 1000 ಜನ ಕೂರುವ ಉತ್ತಮ ಸಭಾಂಗಣ, 600 ಜನ ಕೂರುವ ಡೈನಿಂಗ್ ಹಾಲ್, ರಿಸೆಪ್ಷನ್‌ಗಾಗಿ ದೊಡ್ಡದಾದ ವೇದಿಕೆ, ಸುಂದರವಾದ ಮದುವೆ ಮಂಟಪ ಮತ್ತು 12 ರೂಂಗಳನ್ನು ಒಳಗೊಂಡ ಕಲ್ಯಾಣ ಮಂಟಪ ದೊರೆಯುತ್ತದೆ.
ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್
ತಿಂಗಳಿನಲ್ಲಿ ಕೆಲವೇ ದಿನಗಳು ಖಾಲಿ ಇವೆ
Ph: 0821- 2542099, M: 9880013585

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

ಎಸ್.ಡಿ.ಜೆ. ಗೋಲ್ಡ್ ಕಂಪನಿ
5 Year WARRANTY
ಬದುಕಿಗೆ ಬೇಕಾಗಿರುವುದು ಒಳ್ಳೆಯ ಮನಸ್ಸು
7090279839

ಸಂಪುಟ: ೪೭, ಸಂಚಿಕೆ: ೩, ರಾಷ್ಟ್ರೀಯ ಶಕ ೧೯೩೯ ಶಿಶಿರ:ಪುಷ್ಯ–ಮಾಘ ೧೩, • ಬಿದಿಗೆ ಪುನರ್ವಸು– ಪುಷ್ಯ, ಬುಧವಾರ, ಜ.೩, ೨೦೧೮, ದೂರವಾಣಿ: ೨೪೪೯೫೦೧, ೨೪೪೯೫೦೪, ೨೪೪೯೫೦೫, ಫ್ಯಾಕ್ಸ್: ೨೪೪೯೫೦೩, ಪುಟ : ೧೨, ರೂ. ೩

ವೀಳ್ಯದೆಲೆ ಬೆಳೆಗಾರರಿಗೆ ಭೂಮಿ

ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿ ೩೦ ಎಕರೆ ೨೫ ಗುಂಟೆ ನೀಡಲು ಸಚಿವ ಸಂಪುಟ ಸಮ್ಮತಿ

ಬೆಂಗಳೂರು,ಜ.೨– ಮೈಸೂರಿನ ೨೪೫೪ ವೀಳ್ಯದೆಲೆ ಬೆಳೆಗಾರರಿಗೆ ವೀಳ್ಯದೆಲೆ ಬೆಳೆಯಲು ಅನುಕೂಲವಾಗುವಂತೆ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸುಯೇಜ್ ಫಾರಂನಲ್ಲಿ ಒಟ್ಟು ೩೦ ಎಕರೆ ೨೫ ಗುಂಟೆ ಜಮೀನು ಹಂಚಿಕೆ ಮಾಡಲು ರಾಜ್ಯ ಸಚಿವ ಸಂಪುಟ ಮಂಗಳವಾರ ಒಪ್ಪಿಗೆ ನೀಡಿದೆ.

ನಗರದಲ್ಲಿ ಮಂಗಳವಾರ ಸಂಜೆ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ.ಜಯಚಂದ್ರ ಅವರು, ದೀರ್ಘ ಕಾಲದಿಂದ ನೆನಗುದಿಗೆ ಬಿದ್ದಿದ್ದ ಮೈಸೂರು ನಗರ ವ್ಯಾಪ್ತಿಯ ವೀಳ್ಯದೆಲೆ ಬೆಳೆಗಾರರ ಸಮಸ್ಯೆಗೆ ಕೊನೆಗೂ ಪರಿಹಾರ ಕಂಡುಕೊಡಲಾಗಿದೆ. ೨೪೫೪ ಬೆಳೆಗಾರರಲ್ಲಿ ಪ್ರತಿಯೊಬ್ಬರಿಗೂ ೫ ಗುಂಟೆಯಂತೆ ಭೂಮಿ ನೀಡಲಾಗುವುದು ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ಹಲವು ತೀರ್ಮಾನ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ತಿ.ನರಸೀಪುರಕ್ಕೆ ಕುಡಿವ ನೀರು: ಮೈಸೂರು ಜಿಲ್ಲೆಯ ತಿ.ನರಸೀಪುರ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಪುಟ ಸಮ್ಮತಿ ಸೂಚಿಸಿದೆ. ೭೬ ಕೋಟಿ ರೂ. ವೆಚ್ಚದಲ್ಲಿ ಕಾವೇರಿ ೩ನೇ ಹಂತದ ಕುಡಿಯುವ ನೀರು ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಸಚಿವ ಜಯಚಂದ್ರ ವಿವರಿಸಿದರು.

ಕಿರು ವಿದ್ಯುತ್: ತಿ.ನರಸೀಪುರ ತಾಲ್ಲೂಕು ಹೊಳೆಸಾಲು ಬಳಿ ಕಿರು ವಿದ್ಯುತ್ ಘಟಕ ಸ್ಥಾಪನೆಯಾಗಲಿದೆ. ಗ್ರಾಮದ ಸರ್ವೆ ಸಂಖ್ಯೆ ೮೦೭ ಮತ್ತು ೮೦೮ರ ಪಕ್ಕದಲ್ಲಿರುವ ಕಾವೇರಿ ನದಿ ಪಾತ್ರದ ೩ ಎಕರೆ ಜಮೀನನ್ನು ಕಿರು ವಿದ್ಯುತ್ ಯೋಜನೆಗಾಗಿ ಕಾರ್ತಿಕ್ ಎನರ್ಜಿ ರಿಸೋರ್ಸಸ್ ಪ್ರೈ.ಲಿ. ಕಂಪನಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸಂಪುಟ ಸಮ್ಮತಿಸಿದೆ ಎಂದರು.

ಅಂಬೇಡ್ಕರ್ ಭವನ: ಮೈಸೂರು ನಗರದಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಾಮಗಾರಿಗೆ ೨೦.೬೦ ಕೋಟಿ ರೂ.ಗಳ ಪರಿಷ್ಕೃತ ಅಂದಾಜು ವೆಚ್ಚದ ಪ್ರಸ್ತಾವನೆಗೆ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಮಹಾರಾಣಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಕಟ್ಟಡಗಳ ಕಾಮಗಾರಿಯನ್ನು ೪೫.೯೮ ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೆತ್ತಿಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಮಹಾರಾಣಿ ವಿಜ್ಞಾನ, ಕಲಾ ಕಾಲೇಜು ಕ್ಲಸ್ಟರ್ ವಿವಿಯಾಗಿ ಮೇಲ್ದರ್ಜೆಗೇರಿಸಲು ಸಂಪುಟ ಅನುಮತಿಸಿದೆ ಎಂದರು.

ಮುಂಬಡ್ತಿ ಪ್ರಕ್ರಿಯೆ ಮುಂದೂಡಿಕೆ: ರಾಜ್ಯ ಸರ್ಕಾರದ ನಾಗರಿಕ ಸೇವೆಯ ವಿವಿಧ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಾಮಾನ್ಯ ವರ್ಗದ ಅಧಿಕಾರಿ ಮತ್ತು ಸಿಬ್ಬಂದಿಯ ಮುಂಬಡ್ತಿ ಪ್ರಕ್ರಿಯೆಯನ್ನು ಜ.೧೫ರವರೆಗೆ ಮುಂದೂಡಲಾಗಿದೆ. ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಮುಂಬಡ್ತಿ ಪ್ರಕ್ರಿಯೆಗೆ ತಾತ್ಕಾಲಿಕ ತಡೆ ನೀಡಲು ಸಂಪುಟ ನಿರ್ಧರಿಸಿದೆ.

ಸೇವಾವಧಿ ವಿಸ್ತರಣೆ: ರಾಜ್ಯ ಲೋಕಾಯುಕ್ತ ಸಂಸ್ಥೆಯ ಅಪರ ನಿಬಂಧಕ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ೬ ನ್ಯಾಯಾಧೀಶರ ಸೇವಾವಧಿಯನ್ನು ೧ ವರ್ಷದ ಅವಧಿಗೆ ವಿಸ್ತರಿಸಲು ಸಂಪುಟ ಸಮ್ಮತಿಸಿದೆ.

ವಿಧೇಯಕಕ್ಕೆ ಅನುಮೋದನೆ: ಕೇಂದ್ರ ಸರ್ಕಾರಿ ಸೇವೆಗಳ ಸೌಲಭ್ಯ ಪಡೆಯಲು ಆಧಾರ್ ಜೋಡಣೆ ಕಡ್ಡಾಯ ಮಾಡಿರುವ ಮಾದರಿಯಲ್ಲೇ ರಾಜ್ಯ ಸರ್ಕಾರಿ ಸೇವೆಗಳ ಸೌಲಭ್ಯಗಳನ್ನು ಪಡೆಯಲು ಅನುವಾಗುವಂತೆ 'ಕರ್ನಾಟಕ ರಾಜ್ಯ ಆಧಾರ್ ಆರ್ಥಿಕ ಮತ್ತಿತರ ಸಹಾಯಧನಗಳ ವಿತರಣೆ, ಪ್ರಯೋಜನಗಳು ಹಾಗೂ ಸೇವೆಗಳು ವಿಧೇಯಕ–೨೦೧೭'ಕ್ಕೆ ಸಂಪುಟ ಅನುಮೋದನೆ ನೀಡಿದೆ.

⏭ ೧೦

ಸಂಪುಟ ಮಹತ್ವದ ತೀರ್ಮಾನ

- ತಿ.ನರಸೀಪುರ ಪಟ್ಟಣಕ್ಕೆ ಕುಡಿಯುವ ನೀರಿಗೆ ೭೬ ಕೋಟಿ ರೂ. ವೆಚ್ಚದಲ್ಲಿ ಕಾವೇರಿ ೩ನೇ ಹಂತದ ಯೋಜನೆ
- ಮೈಸೂರು ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಮತ್ತೆ ೨೧ ಕೋಟಿ ರೂ. ಅನುಮೋದನೆ
- ತಿ.ನರಸೀಪುರ ತಾ. ಹೊಳೆಸಾಲು ಗ್ರಾಮದ ಬಳಿ ಕಿರು ವಿದ್ಯುತ್ ಘಟಕ ಸ್ಥಾಪನೆ



ಆಪರೇಷನ್ ಹೆಲ್ಮೆಟ್

ಮೈಸೂರಿನಲ್ಲಿ ಒಂದೇ ದಿನ ೧೫,೫೦೧ ಕಳಪೆ ಹೆಲ್ಮೆಟ್ ಪೊಲೀಸ್ ವಶ!

ಮೈಸೂರು,ಜ.೨– ಕಡಿಮೆ ಬೆಲೆಗೆ ದೊರೆಯುತ್ತದೆ ಎಂದು ಕಳಪೆ ಗುಣಮಟ್ಟದ ಹೆಲ್ಮೆಟ್ ಧರಿಸುವವರಿಗೆ ಪಾಠ ಕಲಿಸಲು ಪೊಲೀಸ್ ಇಲಾಖೆ ಮುಂದಾಗಿದೆ.

ಮಂಗಳವಾರ ಬೆಳಿಗ್ಗೆಯಿಂದಲೇ ನಗರದ ವಿವಿಧೆಡೆ ಕಾರ್ಯಾಚರಣೆ ಆರಂಭಿಸಿದ ಪೊಲೀಸರು, ಐಎಸ್ಐ ಗುರುತು ಹೊಂದಿರದ ೧೫,೫೦೧ ಹೆಲ್ಮೆಟ್(ಶಿರಸ್ತ್ರಾಣ)ಗಳನ್ನು ವಶಕ್ಕೆ ಪಡೆದಿದ್ದಾರೆ.

ದ್ವಿಚಕ್ರವಾಹನಗಳಲ್ಲಿ ಹೋಗುವವರಿಗೆ ಹೆಲ್ಮೆಟ್‌ನದೇ ಸಮಸ್ಯೆ. ಪೊಲೀಸರ ತಪಾಸಣೆ ವೇಳೆ ಕಣ್ಣಮುಚ್ಚಾಲೆ ಆಟವಂತೂ ಮಾಮೂಲು. ನ್ಯಾಯಾಲಯದ ಆದೇಶದಂತೆ ನಗರದಲ್ಲಿಯೂ ಹೆಲ್ಮೆಟ್ ಕಡ್ಡಾಯಗೊಳಿಸಲಾಗಿದೆ. ಇದು ಕೆಲವು ದ್ವಿಚಕ್ರವಾಹನ ಸವಾರರಿಗೆ ಕಷ್ಟವಾಗಿ ಪರಿಣಮಿಸಿದೆ.

ಇದೀಗ ಪೊಲೀಸರು ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಐಎಸ್ಐ ಗುರುತಿರುವ ಹೆಲ್ಮೆಟನ್ನೇ ಕಡ್ಡಾಯವಾಗಿ ಬಳಸಬೇಕು. ತಪ್ಪಿದಲ್ಲಿ ದಂಡ ತೆರಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಅದರಂತೆ ಮಂಗಳವಾರ ಬೆಳಿಗ್ಗೆ ೯ ಗಂಟೆಯಿಂದಲೇ ನಗರದ ವಿವಿಧೆಡೆ ಸಂಚಾರ ಹಾಗೂ ಕಾನೂನು ಸುವ್ಯವಸ್ಥೆ ವಿಭಾಗದ ಪೊಲೀಸರು, ವಾಹನಗಳ ತಪಾಸಣೆಗೆ ರಸ್ತೆಗಿಳಿದರು. ಹೆಲ್ಮೆಟ್ ಧರಿಸಿರುವವರನ್ನೇ ಗುರಿಯಾಗಿಸಿ ತಪಾಸಣೆ ನಡೆಸಿದ ಪೊಲೀಸರು, ಸವಾರರು ಧರಿಸಿರುವ ಹೆಲ್ಮೆಟ್‌ಗಳ ಗುಣಮಟ್ಟ ಪರಿಶೀಲಿಸಿದರು. ಐಎಸ್ಐ ಮಾರ್ಕ್ ಇಲ್ಲದ ಹೆಲ್ಮೆಟ್‌ಗಳನ್ನು ವಶಕ್ಕೆ ಪಡೆದು ಅದರ ಮೇಲೆ ವಾಹನ ಸಂಖ್ಯೆ ನಮೂದಿಸಿದರು.

⏭ ೮

- ಐಎಸ್ಐ ಗುರುತಿನ ಶಿರಸ್ತ್ರಾಣ ಧರಿಸುವಂತೆ ಜಾಗೃತಿ
- ದ್ವಿಚಕ್ರವಾಹನ ಸವಾರರಿಗೆ ಒಂದು ದಿನದ ಗಡುವು
- ಐಎಸ್ಐ ಮಾರ್ಕಿನ ಹೆಲ್ಮೆಟ್ ತಂದು ಮುಚ್ಚಳಿಕೆ ಬರೆದುಕೊಟ್ಟರೆ ಹಳೆಯದು ವಾಪಸ್ ಭರವಸೆ

ಠಾಣೆಗಳಲ್ಲಿ ಹೆಲ್ಮೆಟ್ ರಾಶಿ!

ನಗರದ ವಿವಿಧೆಡೆ ತಪಾಸಣೆ ವೇಳೆ ಸಂಗ್ರಹವಾದ ಕಳಪೆ ಹೆಲ್ಮೆಟ್‌ಗಳನ್ನು ಗರುಡಾ ವಾಹನದಲ್ಲಿ ತುಂಬಿಕೊಂಡು ಠಾಣೆಗಳಿಗೆ ಸಾಗಿಸಲಾಯಿತು. ಠಾಣೆಗಳ ಹೊರ ಆವರಣದಲ್ಲಿ ಹೆಲ್ಮೆಟ್‌ಗಳ ರಾಶಿಯೇ ಸೃಷ್ಟಿಯಾಗಿತ್ತು. ಇನ್ನೊಂದೆಡೆ, ಪೊಲೀಸರ ಮಂಗಳವಾರದ ಕಾರ್ಯಾಚರಣೆಯಿಂದ ಬೆಚ್ಚಿಬಿದ್ದಿರುವ ದ್ವಿಚಕ್ರ ವಾಹನ ಸವಾರರು, ಐಎಸ್ಐ ಗುರುತಿನ ಹೆಲ್ಮೆಟ್ ಖರೀದಿಗೆ ಮುಗಿಬಿದ್ದಿದ್ದರು. ಆಟೋಮೊಬೈಲ್ ಮಳಿಗೆಗಳಲ್ಲಿ ಹೆಲ್ಮೆಟ್ ವ್ಯಾಪಾರ ಜೋರಾಗಿತ್ತು.

ನಂಬರ್ ಪ್ಲೇಟ್ ಇಲ್ಲದ ವಾಹನ ಮುಟ್ಟುಗೋಲು

ಆಂದೋಲನ ವರದಿ ಫಲಶ್ರುತಿ

ಮೈಸೂರು,ಜ.೨– ನಂಬರ್ ಪ್ಲೇಟ್ ಇಲ್ಲದ, ಸೈಲೆನ್ಸರ್ ಪರಿವರ್ತಿಸಿದ ವಾಹನ ನಗರದಲ್ಲಿ ಸಂಚರಿಸುತ್ತಿದ್ದರೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಡಾ.ಎ. ಸುಬ್ರಹ್ಮಣ್ಯೇಶ್ವರರಾವ್ ಎಚ್ಚರಿಸಿದ್ದಾರೆ.

'ಆಂದೋಲನ' ದಿನಪತ್ರಿಕೆ ೨೭ರಲ್ಲಿ ಮಂಗಳವಾರ ಪ್ರಕಟವಾಗಿರುವ 'ಮೈಸೂರಿನಲ್ಲಿ ಅನಾಮಧೇಯ ಬೈಕ್‌ಗಳ ಸಂಚಾರ!' ಶೀರ್ಷಿಕೆ ವರದಿಗೆ ಪ್ರತಿಕ್ರಿಯಿಸಿದ ಅವರು, ನಂಬರ್ ಪ್ಲೇಟ್ ಇಲ್ಲದ, ಕರ್ಕಶ ಶಬ್ದದ ಸೈಲೆನ್ಸರ್ ವಾಹನಗಳು ಕಂಡು ಬಂದರೆ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಸಾರ್ವಜನಿಕರು ಇಂತಹ ವಾಹನಗಳನ್ನು ನಗರದ ರಸ್ತೆಗಳಲ್ಲಿ ಚಲಾಯಿಸಬಾರದು. ನಿಯಮಗಳನ್ನು ಪಾಲಿಸಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಪ್ರಥಮ ಪ್ರಜೆಗೆ ಕೈಚಳಕ

ಮೈಸೂರು ಮಹಾನಗರ ಪಾಲಿಕೆ ಮಹಾಪೌರ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲು

ಮೈಸೂರು,ಜ.೨– ಮೈಸೂರು ಮಹಾನಗರ ಪಾಲಿಕೆ ಪ್ರಸಕ್ತ ಅವಧಿಯ ಕೊನೆ ವರ್ಷದ ಮಹಾಪೌರ ಸ್ಥಾನ ಅನಾಯಾಸವಾಗಿ ಕಾಂಗ್ರೆಸ್ ಮಡಿಲಿಗೆ ಬಿದ್ದಿದೆ. ಇತ್ತೀಚಿನ ವರ್ಷಗಳಲ್ಲಿ ಮೊದಲ ಬಾರಿಗೆ ಮಹಾಪೌರ ಮತ್ತು ಉಪ ಮಹಾಪೌರ ಸ್ಥಾನಗಳಿಗೆ ಅವಿರೋಧ ಆಯ್ಕೆಗೆ ವೇದಿಕೆ ಸಜ್ಜಾಗಿದೆ.

ಮಹಾಪೌರ, ಉಪ ಮಹಾಪೌರ ಸ್ಥಾನಗಳಿಗೆ ಮೀಸಲಾತಿ ಕೊನೆಗೂ ಮಂಗಳವಾರ ಪ್ರಕಟ ವಾಗಿದೆ. ನಿರೀಕ್ಷೆಯಂ ತೆಯೇ ಪರಿಶಿಷ್ಟ ಜಾತಿ ಮಹಿಳೆಗೆ ಮಹಾಪೌರರ ಸ್ಥಾನ ನಿಗದಿಯಾಗಿದೆ. ೪ ವರ್ಷಗಳಿಂದ ಅಧಿಕಾರದಿಂದ ದೂರವಿದ್ದ ಕಾಂಗ್ರೆಸ್‌ಗೆ ಈ ಮೀಸಲಾತಿ ವರವಾಗಿ ಪರಿ ಣಮಿಸಿದೆ. ಅಧಿಕಾರ ಹಿಡಿಯಲು ಕಾಂಗ್ರೆಸ್ ನಾಯಕರು ನಡೆಸಿದ ತಂತ್ರಗಾರಿಕೆ ಯಶಸ್ವಿಯಾಗಿದೆ.

೪ ವರ್ಷಗಳಿಂದ ಮೈತ್ರಿ ಆಡಳಿತ ನಡೆಸಿದ ಜಾ.ದಳ ಮತ್ತು ಬಿಜೆಪಿಯಲ್ಲಿ ಪರಿಶಿಷ್ಟ ಜಾತಿ ಮಹಿಳೆ ಮೀಸಲು ಕ್ಷೇತ್ರದಿಂದ ಆಯ್ಕೆಯಾದ ಒಬ್ಬ ಸದಸ್ಯೆಯೂ ಇಲ್ಲದ ಕಾರಣ ಕಾಂಗ್ರೆಸ್‌ಗೆ ಸರಾಗವಾಗಿ ಅಧಿಕಾರ ದಕ್ಕಲಿದೆ. ಉಪ ಮಹಾಪೌರ ಸ್ಥಾನ ಜಾ.ದಳಕ್ಕೆ ಲಭ್ಯವಾಗಲಿದೆ. ಮೀಸಲಾತಿ ಮೇಲಾಟದಲ್ಲಿ ಬಿಜೆಪಿಗೆ ಯಾವುದೇ ಅಧಿಕಾರ ಇಲ್ಲದಂತಾಗಿದೆ.

ಕಾಂಗ್ರೆಸ್ಸಿನ ಕಮಲಾ ಉದಯ್ (ವಾರ್ಡ್ ನಂ ೫೦) ಅಥವಾ ಭಾಗ್ಯವತಿ (ವಾರ್ಡ್ ನಂ.೨೩) ಮಹಾ ಪೌರರಾಗುವುದು ಖಚಿತ. ಉಪ ಮಹಾಪೌರರ ಸ್ಥಾನ ಪರಿಶಿಷ್ಟ ಪಂಗಡ ಮಹಿಳೆಗೆ ಮೀಸಲಾಗಿರುವುದರಿಂದ ಈ ವರ್ಗದಿಂದ ಆಯ್ಕೆಯಾಗಿರುವ ಸದಸ್ಯೆ ಜಾ.ದಳದ ಇಂದಿರಾ ಮಹೇಶ್ (ವಾರ್ಡ್ ನಂ.೬೧) ಉಪ ಮಹಾಪೌರರಾಗಲಿದ್ದಾರೆ.

ಈಗಿನ ಮಹಾಪೌರ ಎಂ.ಜೆ.ರವಿಕುಮಾರ್, ಉಪ ಮಹಾಪೌರರಾದ ರತ್ನಾ ಲಕ್ಷ್ಮಣ್ ಅವರು ಅಧಿಕಾರಾವಧಿ ತಾಂತ್ರಿಕವಾಗಿ ಡಿ.೬ಕ್ಕೇ ಮುಗಿದಿದೆ. ಮೀಸಲಾತಿ ನಿಗದಿ ವಿಳಂಬದಿಂದಾಗಿ ೧ ತಿಂಗಳಿಗೂ ಹೆಚ್ಚುಕಾಲ ಅವರಿಬ್ಬರಿಗೂ ಬೋನಸ್ ಅಧಿಕಾರಾವಧಿ ದೊರೆತಂತಾಗಿದೆ. ನೂತನ ಮಹಾಪೌರರ ಚುನಾವಣೆವರೆಗೂ ಈಗಿರುವವರೇ ಮುಂದುವರಿಯಲಿದ್ದಾರೆ.

⏭ ೧೦

ಕಮಲಾ

ಭಾಗ್ಯವತಿ

ಇಂದಿರಾ

- ಕಾಂಗ್ರೆಸ್‌ಗೆ ಅನಾಯಾಸ ಒಲಿಯ ಲಿರುವ ಅಧಿಕಾರ
- ಕಮಲಾ ಉದಯ್, ಭಾಗ್ಯವತಿ ನಡುವೆ ಪೈಪೋಟಿ
- ಉಪ ಮಹಾಪೌರ ಸ್ಥಾನ ಪರಿಶಿಷ್ಟ ಪಂಗಡ ಮಹಿಳೆಗೆ
- ಜಾ.ದಳದ ಇಂದಿರಾ ಅವಿರೋಧ ಆಯ್ಕೆ ಸಂಭವ

ಯಾವ ವರ್ಗಕ್ಕೆ ದಕ್ಕಿತ್ತು?

ಪಾಲಿಕೆಯ ಪ್ರಸಕ್ತ ಆಡಳಿತಾವಧಿಯಲ್ಲಿ ಮೊದಲ ವರ್ಷ ಸಾಮಾನ್ಯ ಮಹಿಳೆಗೆ ಮಹಾಪೌರ ಸ್ಥಾನ ಮೀಸಲಾಗಿತ್ತು. ೨ನೇ ವರ್ಷದ ಅವಧಿಗೆ ಸಾಮಾನ್ಯ ವರ್ಗ, ೩ನೇ ವರ್ಷದ ಅವಧಿಯು ಹಿಂದುಳಿದ ವರ್ಗಕ್ಕೆ, ೪ನೇ ವರ್ಷದ ಅವಧಿಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾತಿ ನಿಗದಿಯಾಗಿತ್ತು. ಕ್ರಮವಾಗಿ ರಾಜೇಶ್ವರಿ ಸೋಮು, ಆರ್.ಲಿಂಗಪ್ಪ, ಬಿ.ಎಲ್.ಭೈರಪ್ಪ, ಎಂ.ಜೆ. ರವಿಕುಮಾರ್ ಮಹಾಪೌರರ ಸ್ಥಾನವನ್ನು ಅಲಂಕರಿಸಿದರು. ಉಪ ಮಹಾಪೌರರಾಗಿ ಕ್ರಮವಾಗಿ ಎಂ.ಜೆ.ರವಿಕುಮಾರ್, ವಿ.ಶೈಲೇಂದ್ರ, ವನಿತಾ ಪ್ರಸನ್ನ, ರತ್ನಾ ಲಕ್ಷ್ಮಣ ಆಯ್ಕೆ ಯಾಗಿದ್ದರು.

ಒಪಿಡಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ರಾಷ್ಟ್ರೀಯ ವೈದ್ಯಕೀಯ ಆಯೋಗ-೨೦೧೭ ವಿಧೇಯಕ ವಿರೋಧಿಸಿ ಐಎಂಎ ನೇತೃತ್ವದಲ್ಲಿ ರಾಷ್ಟ್ರಾದ್ಯಂತ ಪ್ರತಿಭಟನೆ

ಮೈಸೂರು,ಜ.೨– ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ 'ರಾಷ್ಟ್ರೀಯ ವೈದ್ಯಕೀಯ ಆಯೋಗ' ರಚನೆ ವಿರೋಧಿಸಿ ಐಎಂಎ ನೇತೃತ್ವದಲ್ಲಿ ಮೈಸೂರು ಸೇರಿದಂತೆ ದೇಶಾದ್ಯಂತ ಖಾಸಗಿ ಆಸ್ಪತ್ರೆಗಳ ಹೊರ ರೋಗಿಗಳ ವಿಭಾಗ ವನ್ನು (ಒಪಿಡಿ) ಮಂಗಳವಾರ ಬಂದ್ ಮಾಡಿ ಪ್ರತಿಭಟನೆ ನಡೆಸಲಾಗಿದ್ದು, ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮೈಸೂರಿನಲ್ಲಿ ಮಂಗಳವಾರ ಬೆಳಿಗ್ಗೆಯಿಂದ ೧೦೦ಕ್ಕೂ ಹೆಚ್ಚು ಖಾಸಗಿ ಆಸ್ಪತ್ರೆಗಳ ಹೊರ ರೋಗಿಗಳ ವಿಭಾಗ ಬಂದ್ ಆಗಿದ್ದವು. ಗೋಪಾಲಗೌಡ ಆಸ್ಪತ್ರೆ, ಸೀತಾರಂಗ ಆಸ್ಪತ್ರೆ, ಮಿಷನ್ ಆಸ್ಪತ್ರೆ, ಬೃಂದಾವನ ಆಸ್ಪತ್ರೆ, ವಾತ್ಸಲ್ಯ ಆಸ್ಪತ್ರೆ ಸೇರಿದಂತೆ ಅನೇಕ ಆಸ್ಪತ್ರೆಗಳು ಒಪಿಡಿ ಬಂದ್ ಮಾಡಿದ್ದವು. ಆಸ್ಪತ್ರೆಗಳಿಗೆ ಬಂದ ರೋಗಿಗಳು, ಒಪಿಡಿ ಬಂದ್ ಆಗಿರುವುದನ್ನು ಕಂಡು ಬಳಿಕ ಸರ್ಕಾರಿ ಆಸ್ಪತ್ರೆಗಳತ್ತ ಮುಖ ಮಾಡಿದರು.

ಆದರೆ, ಕಾರ್ಪೊರೇಟ್ ಆಸ್ಪತ್ರೆಗಳಾದ ಜೆಎಸ್‌ಎಸ್, ಅಪೋಲೊ, ಕೊಲಂಬಿಯಾ ಏಷಿಯಾ ಹಾಗೂ ಕಾವೇರಿ ಫೋರ್ಟಿಸ್, ಚಂದ್ರಕಲಾ ಆಸ್ಪತ್ರೆ, ವಿದ್ಯಾರಣ್ಯ ಆಸ್ಪತ್ರೆ, ಸುಶ್ರುತಾ ಆಸ್ಪತ್ರೆ, ಕಾಮಾಕ್ಷಿ ಆಸ್ಪತ್ರೆಗಳಲ್ಲಿ ಎಂದಿನಂತೆ ಹೊರರೋಗಿಗಳ ಚಿಕಿತ್ಸಾ ವಿಭಾಗ ಕಾರ್ಯನಿರ್ವಹಿಸಿದವು.

ಗೊಂದಲ: ಭಾರತೀಯ ವೈದ್ಯಕೀಯ ಸಂಘ ಒಪಿಡಿ ಬಂದ್‌ಗೆ ಕರೆ ನೀಡಿದ ಮಾಹಿತಿ ಸೋಮವಾರ ಸಂಜೆಯಷ್ಟೇ ಮೈಸೂರಿನ ಖಾಸಗಿ ಆಸ್ಪತ್ರೆಗಳಿಗೆ ತಲುಪಿದ್ದರಿಂದ ಬಂದ್‌ನಲ್ಲಿ ಭಾಗವಹಿಸುವ ವಿಚಾರದಲ್ಲಿ ಗೊಂದಲ ಉಂಟಾಗಿತ್ತು.

⏭ ೮

ಕೆ.ಆರ್. ಆಸ್ಪತ್ರೆಯ ಒಪಿಡಿ ಎಂದಿನಂತೆ ಕಾರ್ಯನಿರ್ವಹಿಸಿದ್ದು, ರೋಗಿಗಳು ಚಿಕಿತ್ಸೆ ಪಡೆದುಕೊಂಡರು.

ಕೋರೆಗಾಂವ್ ವಿಜಯೋತ್ಸವ: ಪುಣೆ, ಮುಂಬೈನಲ್ಲಿ ಹಿಂಸಾಚಾರ

ರೈಲು, ಬಸ್ ಸೇವೆ ಸ್ಥಗಿತ; ಜನಜೀವನ ಅಸ್ತವ್ಯಸ್ತ

ಮುಂಬೈ,ಜ.೨– ಭೀಮಾ ಕೋರೆಗಾಂವ್ ಯುದ್ಧದ ೨೦೦ನೇ ವಿಜಯೋತ್ಸವದ ಸಂದರ್ಭದಲ್ಲಿ ನಡೆದ ಹಿಂಸಾಚಾರ ಮಂಗಳವಾರ ಮಹಾರಾಷ್ಟ್ರದ ಹಲವು ಭಾಗಗಳಿಗೆ ವ್ಯಾಪಿಸಿದ್ದು, ಪುಣೆ ಮತ್ತು ಮುಂಬೈನಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ.

ಹಿಂಸಾಚಾರ ಖಂಡಿಸಿ ಮುಂಬೈ, ಪುಣೆ ಸೇರಿದಂತೆ ಮಹಾರಾಷ್ಟ್ರದ ಹಲವೆಡೆ ಪ್ರತಿಭಟನೆಗಳು ನಡೆದಿದ್ದು, ರೈಲು ಮತ್ತು ರಸ್ತೆತಡೆ ನಡೆಸಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವು ಕಡೆಗಳಲ್ಲಿ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ ಘಟನೆಗಳು ನಡೆದಿವೆ.

ಚೆಂಬೂರಿನಲ್ಲಿ ಪ್ರತಿಭಟನಾಕಾರರು ರೈಲು ತಡೆದು ಸರ್ಕಾರದ ವಿರುದ್ಧ ಘೋಷಣೆ ಹಾಕಿದರು. ಚೆಂಬೂರು, ವಿಖ್ರೋಲಿ, ಮನ್‌ಖುರ್ದ್ ಮತ್ತು ಗೋವಂದಿ ಪ್ರದೇಶದ ಯುವಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಈ ಪ್ರದೇಶದಲ್ಲಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಲಾಗಿತ್ತು. ರಾಷ್ಟ್ರೀಯ ಸುದ್ದಿವಾಹಿನಿಯ ಪತ್ರಕರ್ತರೊಬ್ಬರ ಮೇಲೆ ಈ ಸಂದರ್ಭದಲ್ಲಿ ಹಲ್ಲೆ ನಡೆದಿದೆ.

ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಕೇಂದ್ರೀಯ ರೈಲ್ವೆ ಕುರ್ಲಾ ಮತ್ತು ವಾಶಿ ನಡುವಣ ಉಪನಗರ ರೈಲು ಸೇವೆಯನ್ನು ಸ್ಥಗಿತಗೊಳಿಸಿದೆ. ಪೂರ್ವ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ನೂರಾರು ಪ್ರತಿಭಟನಾಕಾರರು ಮೆರವಣಿಗೆ ನಡೆಸಿದರು.

⏭ ೧೦

ಘರ್ಷಣೆಗೆ ದಲಿತ ಯುವಕ ಬಲಿ

ಪುಣೆ: ಇಲ್ಲಿ ನಡೆದ ಭೀಮಾ ಕೋರೆ ಗಾಂವ್ ಯುದ್ಧದ ವಿಜಯೋತ್ಸವ ಹಿಂಸಾಚಾರಕ್ಕೆ ತಿರುಗಿ ಓರ್ವ ದಲಿತ ಯುವಕ ಬಲಿಯಾಗಿದ್ದಾನೆ.

ಭೀಮಾ ಕೋರೆಗಾಂವ್ ಯುದ್ಧದಲ್ಲಿ ದಲಿತರನ್ನು ಒಳಗೊಂಡ ಬ್ರಿಟಿಷ್ ಸೇನೆ ಮೇಲ್ಜಾತಿಯವರನ್ನು ಒಳಗೊಂಡ ಪೇಶ್ವೆ ಸೇನೆಯನ್ನು ಸೋಲಿಸಿದ ಸ್ಮರಣಾರ್ಥ ಸೋಮವಾರ ಪುಣೆಯಲ್ಲಿ ಆಯೋಜಿಸಿದ್ದ ೨೦೦ನೇ ವಿಜಯೋತ್ಸವದಲ್ಲಿ ಲಕ್ಷಾಂತರ ದಲಿತರು ಭಾಗವಹಿಸಿದ್ದರು. ಈ ಸಂದರ್ಭ ಎರಡು ಗುಂಪುಗಳ ಮಧ್ಯೆ ಘರ್ಷಣೆ ಉಂಟಾಗಿ ಹಲವರು ಮಂದಿ ಗಾಯಗೊಂಡಿದ್ದಾರೆ.

ಕರಾಟೆ ಕಿಡ್ ಮೈಸೂರು ಕುವರಿ ಅಂತಾರಾಷ್ಟ್ರೀಯ ಮಟ್ಟಕ್ಕೆ

⏭ ವರದಿ ಪುಟ ೧೧

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 380
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ
THOLASI JEWELS
₹2750
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926